ಮಾಡ್ತಿನಿ ಸಾರ್' ಇವುಗಳಲ್ಲೇ ಮುಗಿಸಿ ಫೋನಿಟ್ಟ. ಅಲ್ಲಿದ್ದ ಮೂವರೂ ಒಂದೇ ಗಂಟಲಲ್ಲಿ, 'ಏನಂತೆ ಸಾ' ಅಂದರು. 'ಅಯ್ಯೋ, ಏನಿಲ್ಲ ಕಣ್ರೀ, ನನ್ನ ರಿಸರ್ಚ್ ಮ್ಯಾಟರು' ಎಂದು ಗೊಣಗುತ್ತಾ ಹೊರಟ ಹುಲಗಪ್ಪ, 'ಆಸಾಮಿ ಏನೋ ಮುಚ್ಚಿಡುತ್ತಿದ್ದಾನೆ' ಎನ್ನುವಂತೆ ಆ ಮೂವರೂ ಕಣ್ಣಲ್ಲೇ ಮಾತಾಡಿಕೊಂಡಿದ್ದನ್ನು ಕಿರುಗಣ್ಣಲ್ಲೇ ಗಮನಿಸಿದ.

ರೂಮಿಗೆ ಬಂದು ಮಂಚದ ಮೇಲೆ ಅಡ್ಡಾದ ಹುಲಗಪ್ಪನಿಗೆ ತಾಸೀಲ್ದಾರ್ ಮಾತಿನಲ್ಲಿದ್ದ ಗಲಿಬಿಲಿ ನೆನಪಾಗಿ ನಗು ಬಂತು. ತಾಸೀಲ್ದಾರ್ ಒಂದು ಚಣ ಬುದ್ಧಿವಾದ ಹೇಳುವ ಮೇಷ್ಟ್ರ ಹಾಗೆ, ಮುಂದಿನ ಚಣಕ್ಕೆ ಧಮಕಿ ಹಾಕಿ ತಾಕೀತು ಮಾಡುವ ಅಧಿಕಾರಿಯ ಹಾಗೆ, ಮರು ಚಣಕ್ಕಾಗಲೇ ಹುಲಗಪ್ಪನ ಹಿತ ಕಾಯುವ ನೆಂಟನ ಹಾಗೆ ಮಾತಾಡುತ್ತಿದ್ದ ಧಾಟಿ ಮೋಜೆನ್ನಿಸತೊಡಗಿತು.

ತಾಸೀಲ್ದಾರ್ ಬಡಬಡಿಸಿದ್ದರ ಸಾರಾಂಶ ಇಷ್ಟು: ರಾವಬಹದ್ದೂರ್ ದೇಸಾಯಿ ನಾಡಿನ ಬಹಳ ದೊಡ್ಡ ಲೇಖಕರು. ಒಂದಲ್ಲ ಒಂದು ದಿನ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬರುವುದು ಗ್ಯಾರಂಟಿ. ಅಂಥ ದೊಡ್ಡ ಲೇಖಕರು ತಮ್ಮ ಜೀವಮಾನವೆಲ್ಲ ವಾಲ್ಮೀಕಿ ಥರಾ ತಪಸ್ಸು ಮಾಡಿ, ನಮ್ಮ ಜಿಲ್ಲೆಯ ಕೋಟೆಯ ಬಗ್ಗೆ ಬೃಹತ್ ಗ್ರಂಥ ಬರೀತಾ ಇದಾರೆ! ದೊಡ್ ಮನುಷ್ಯ ರೀ... ಎಂದೆಲ್ಲ ಏದುಸುರಿನಲ್ಲಿ ಹೇಳುತ್ತಿದ್ದ ತಾಸೀಲ್ದಾರ್, ಸಡನ್ನಾಗಿ ದನಿ ಸಣ್ಣದಾಗಿಸಿ, 'ದೊಡ್ ಜಾತೀ ಜನಾ ರೀ' ಎಂಬುದನ್ನು ಕಿವಿಮಾತು ಹೇಳುವಂತೆ ಉಸುರಿದ್ದ. ಆದ್ದರಿಂದ ನೀನು ಅದೇ ವಿಷಯದ ಮೇಲೆ ಏನೇನೋ ಅಸಂಬದ್ಧವಾದದ್ದನ್ನು ಬರೆಯುವುದನ್ನು ನಿಲ್ಲಿಸಬೇಕು. ಇದನ್ನೆಲ್ಲ ಮೇಲಿನೋರು ನನಗೆ ಹೇಳಿಕಳಿಸಿದಾರೆ. ನಿನ್ನ ಒಳ್ಳೇದಕ್ಕೇ ನಾನು ಹೇಳ್ತಿರೋದು! ಇಷ್ಟು ಹೇಳಿ ತಾಸೀಲ್ದಾರ್ ಫೋನಿಟ್ಟಿದ್ದ.

ಹುಲಗಪ್ಪನಿಗೆ ಮತ್ತೆ ನಗು ಬಂತು. ಎರಡು ವರ್ಷದ ಕೆಳಗೆ ಹುಲಗಪ್ಪ ಗೊಂಡರ್ ವಿಶ್ವವಿದ್ಯಾಲಯದ ಹಿಸ್ಟರಿ ಡಿಪಾರ್ಟ್‌ಮೆಂಟಿನಲ್ಲಿ ರಿಸರ್ಚರ್ ಆಗಿ ಸೇರಿಕೊಂಡಿದ್ದ; 'ತ್ರಿಭುವನ ಮಹಿಪಾಲ ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಪ್ರಭುತ್ವ ಮತ್ತು ಸಾಮಾಜಿಕ ಜೀವನ' ಎಂಬ ವಿಷಯದ ಮೇಲೆ ಫೀಲ್ಡ್ ವರ್ಕ್, ಡೆಸ್ಕ್ ವರ್ಕ್ ಎರಡೂ ಒಟ್ಟಿಗೇ ಮಾಡುತ್ತಿದ್ದ. ವಿಶ್ವವಿದ್ಯಾಲಯದಿಂದ ಆರು ಮೈಲಿ ದೂರವಿದ್ದ ಮಹಿಪಾಲರ ಕೋಟೆ ಚಿಕ್ಕವನಾಗಿದ್ದಾಗಿನಿಂದಲೂ ಹುಲಗಪ್ಪನಿಗೆ ಅಂಗೈನಂತೆ ಪರಿಚಿತವಿತ್ತು. ಈ ವಿಷಯದ ಮೇಲೆ ಈ ವರ್ಷ ಒಂದೆರಡು ರಿಸರ್ಚ್ ಪೇಪರ್ ಬರೆಯುತ್ತಿದ್ದ ಹುಲಗಪ್ಪ, 'ಕನ್ನಡವಾಣಿ'ಯ ಸಂಪಾದಕ ಕೇಳಿದ್ದರಿಂದ ಒಂದು ಲೇಖನ ಬರೆದಿದ್ದ. ಅದು ತೀರಾ ಉದ್ದವಾಗಿದ್ದರಿಂದ ಸಂಪಾದಕ ಎರಡು ಕಂತಿನಲ್ಲಿ ಪ್ರಕಟಿಸಲಿದ್ದ. ಈಗ ನೋಡಿದರೆ ರಾವ್ ಬಹದ್ದೂರ್ ದೇಸಾಯಿಯಂಥ ದೊಡ್ಡ ರೈಟರು ಮೊದಲ ಕಂತಿನ ಬರವಣಿಗೆಗೇ ಹೆದರಿ ತಾಸೀಲ್ದಾರ್ ಕೈಲಿ ಫೋನ್ ಮಾಡಿಸಿದಂತಿದೆ! ಹಂಗಾದರೆ ಈ ರಿಸರ್ಚಿನಲ್ಲಿ ಭಾರೀ ದೊಡ್ಡದೇನೋ ಇದೆ ಎಂದು ಹುಲಗಪ್ಪ ಒಳಗೊಳಗೇ ಉಬ್ಬಿದ. ಸರಿ, ಈ ಲೇಖನ ಮುಗಿಯಿತಲ್ಲ, ಮುಂದೆ ಬರೆದಾಗ ನೋಡಿಕೊಳ್ಳೋಣ ಎಂದು ಸುಮ್ಮನಾದ.

ಈ ಗುಂಗಿನಲ್ಲೇ ಇದ್ದ ಹುಲಗಪ್ಪ ಮಾರನೆಯ ದಿನ ಡಿಪಾರ್ಟ್‌ಮೆಂಟಿಗೆ ಬರುವುದನ್ನೇ ಕಾಯುತ್ತಿದ್ದವನಂತೆ ಕಂಡ ಹೆಡ್ಡು ತನ್ನ ತಲೆಯ ಮೇಲೆ ಏನೋ ಬಿದ್ದವನಂತೆ ಒಂದೇ ಉಸಿರಿಗೆ ಕೂಗಿಕೊಂಡ: 'ರೀ ರೀ ಹುಲಗಪ್ಪಾ, ವೈಸ್ ಚಾನ್ಸಲರ್ ಫೋನ್ ಮಾಡಿದ್ರು ರೀ. ಬೇಗ ಹೋಗಿ ನೋಡ್ಕೊಂಬರ್ರಿ.' ಓ! ತಾಸೀಲ್ದಾರ್ ಆಯ್ತು, ಈಗ ವೈಸ್ ಚಾನ್ಸಲರ್ ತಗುಲಿಕೊಂಡ ಎಂದು ಒಳಗೊಳಗೇ ನಗುತ್ತಾ ಸರಸರ ಹೊರಟ ಹುಲಗಪ್ಪನಿಗೆ ವೈಸ್ ಚಾನ್ಸಲರ್ ಚೇಂಬರಿನ ಹೊರಗೆ ಚೀಟಿ ಕೊಟ್ಟು ಕಾಯುವ ಗೋಜೇ ಬರಲಿಲ್ಲ! 'ಹುಲಗಪ್ಪ' ಎಂಬ ಹೆಸರು ಕೇಳಿದ ತಕ್ಷಣ, ಸಿಪಾಯಿ ಸೀದಾ ಒಳಗೆ ಬಿಟ್ಟ. ಯಾರು ಎನ್ನುವಂತೆ ವೈಸ್ ಚಾನ್ಸಲರ್ ಕತ್ತೆತ್ತಿ ನೋಡಿದಾಗ, 'ಹುಲಗಪ್ಪ ಗೊಂಡರ್ ಅಂತ ಸಾರ್' ಅಂದ. ಹುಲಗಪ್ಪನ ಇಸ್ತ್ರಿಯಿರದ ಕಾಟನ್ ಶರಟನ್ನೂ, ಜೀನ್ಸ್ ಪ್ಯಾಂಟನ್ನೂ ಒಂದೇ ಸೆಕೆಂಡಿನಲ್ಲಿ ಅಳೆದು ತೂಗಿದ ವೈಸ್ ಚಾನ್ಸಲರ್ 'ಕೂತ್ಕೊಳ್ರೀ' ಅಂದ. 'ಪರ್ವಾಗಿಲ್ಲ ಸಾರ್' ಎಂದು ಹುಲಗಪ್ಪ ನಿಂತ. ಕೈಯನ್ನು ಜೇಬಿನಲ್ಲಿರಿಸಿಕೊಳ್ಳಲೋ, ಹಿಂದಕ್ಕೆ ಕಟ್ಟಿಕೊಳ್ಳಲೋ ಎಂಬ ಇರಿಸುಮುರಿಸಿನಲ್ಲಿದ್ದ ಹುಲಗಪ್ಪನಿಗೆ, 'ಏನ್ರೀ, ಎಜುಕೇಶನ್ ಮಿನಿಸ್ಟರ್ ತನಕ ನಿಮ್ಮ ಹೆಸರು ಹೋಗಿದೆಯಲ್ರೀ!' ಎಂದು ವೈಸ್ ಚಾನ್ಸಲರ್ ಅಸಂಬದ್ಧವಾಗಿ ನಕ್ಕ. 'ಎಲ್ರೀ, ನಿಮ್ಮನ್ನ ಲೈಬ್ರರೀಲಿ ಎಂದೂ ನೋಡೇ ಇಲ್ವಲ್ರೀ?' ಎಂದು ಹುಬ್ಬೇರಿಸಿದ.